ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 23-12-1994.

# *ತಮ್ಮ ಮೂರು ಸ್ವರೂಪವೂ ಸದಾ ಸ್ಮೃತಿಯಲ್ಲಿರಲಿ- 1.ಸಂಗಮಯುಗೀ ಬ್ರಾಹ್ಮಣ. 2.ಬ್ರಾಹ್ಮಣನಿಂದ ಫರಿಶ್ತಾ ಮತ್ತು 3 ಫರಿಶ್ತೆಯಿಂದ ದೇವತೆ.*

(अपने तीन स्वरूप सदा स्मृति में रहें - 1-.संगमयुगी ब्राह्मण, 2-.ब्राह्मण सो फरिश्ता और 3-.फरिश्ता सो देवता)

ಇಂದು ಬಾಪ್‌ದಾದಾರವರು ನಾಲ್ಕೂ ಕಡೆಯಲ್ಲಿರುವ ಮಕ್ಕಳ ಮೂರು ರೂಪಗಳನ್ನು ನೋಡುತ್ತಿದ್ದಾರೆ ಅತ್ಯಂತ ಶ್ರೇಷ್ಠವಾದ ಸ್ವರೂಪವಾಗಿದೆ- ಬ್ರಾಹ್ಮಣ ಹಾಗೂ ಬ್ರಾಹ್ಮಣನಿಂದ ಫರಿಶ್ತಾ, ಫರಿಶ್ತಾನಿಂದ ದೇವತೆ ಬ್ರಾಹ್ಮಣ ಸ್ವರೂಪ, ಫರಿಶ್ತಾ ಸ್ವರೂಪ ಹಾಗೂ ದೇವತಾ ಸ್ವರೂಪ ಬ್ರಾಹ್ಮಣ ಸ್ವರೂಪದ ವಿಶೇಷತೆ- ಸರ್ವಶಕ್ತಿಗಳಿಂದ ಸಂಪನ್ನವಾದ ಸ್ವರೂಪವಾಗಿದೆ ಏಕೆಂದರೆ ಬ್ರಾಹ್ಮಣ ಅರ್ಥಾತ್ ಮಾಯಾಜೀತರು ಹಾಗಾದರೆ ಸರ್ವಶಕ್ತಿ ಸಂಪನ್ನರಾಗುವುದೇ ಮಾಯಾಜಿತರಾಗುವುದು ಮೊದಲ ಸ್ವರೂಪವಾದ ಬ್ರಾಹ್ಮಣ ಸ್ವರೂಪ ಸ್ವಯಂ ಅನ್ನು ನೋಡಿಕೊಳ್ಳಿರಿ ಬ್ರಾಹ್ಮಣ ಸ್ವರೂಪದ ವಿಶೇಷತೆ ಏನಿದೆಯೋ ಆ ಶಕ್ತಿಗಳು ಧಾರಣೆಯಾಗಿವೆಯೇ? ಸರ್ವಶಕ್ತಿಗಳು ಇವೆಯೇ? ಅಥವಾ ಕೆಲಕೆಲವು ಶಕ್ತಿಗಳಿವೆಯೇ? ಒಂದುವೇಳೆ ಒಂದು ಶಕ್ತಿಯ ಕೊರತೆಯಿದೆ ಅಥವಾ ಕಡಿಮೆಯಿದ್ದರೂ ಬ್ರಾಹ್ಮಣ ಸ್ವರೂಪಕ್ಕೆ ಬದಲು ಮತ್ತೆ-ಮತ್ತೆ ಕ್ಷತ್ರಿಯ ಅರ್ಥಾತ್ ಯುದ್ಧ ಮಾಡುವವರು ಆಗಿಬಿಡುತ್ತೀರಿ. ಕ್ಷತ್ರಿಯರ ಕರ್ತವ್ಯವಾಗಿದೆ- ಯುದ್ಧ ಮಾಡುವುದು ಮತ್ತು ಬ್ರಾಹ್ಮಣರ ಕರ್ತವ್ಯ ಸದಾ ಸರ್ವಶಸ್ತ್ರಗಳಿಂದ ಸಂಪನ್ನರಾಗಿರುವುದು ಮತ್ತು ಕ್ಷತ್ರಿಯ ಅರ್ಥಾತ್ ಕೆಲವೊಮ್ಮೆ ವಿಜಯೀ ಹಾಗೂ ಕೆಲವೊಮ್ಮೆ ಸೋಲನ್ನನುಭವಿಸುವವರು ಏಕೆಂದರೆ ಶಕ್ತಿಗಳು ಸಿಗುತ್ತಿದ್ದರೂ ಧಾರಣೆ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ ಆದ್ದರಿಂದ ಸಮಯ ಹಾಗೂ ಪರಿಸ್ಥಿತಿಯನುಸಾರ ಸದಾ ವಿಜಯಿಯಾಗಲು ಸಾಧ್ಯವಿಲ್ಲ ಬ್ರಾಹ್ಮಣ ಸ್ವರೂಪವೆಂದರೆ ಸದಾ ಕಿರೀಟ, ಸಿಂಹಾಸನ ಹಾಗೂ ತಿಲಕಧಾರಿಗಳು ವಿಶ್ವಕಲ್ಯಾಣ ಜವಾಬ್ದಾರಿಯ ಕಿರೀಟಧಾರಿ ಸದಾ ಸ್ವತಹವಾಗಿ ಸ್ಮೃತಿಯ ತಿಲಕಧಾರಿ, ಸದಾ ತಂದೆಯ ಹೃದಯ ಸಿಂಹಾಸನಾಧಾರಿ. ಕ್ಷತ್ರಿಯರು ಏಕರಸ, ಅಚಲ, ಅಡೋಲವಾಗಿರದೇ ಇರುವ ಕಾರಣದಿಂದ ಕೆಲವೊಮ್ಮೆ ಅಚಲ, ಕೆಲವೊಮ್ಮೆ ಏರುಪೇರಿನಲ್ಲಿ ಕೆಲವೊಮ್ಮೆ ಅಧಿಕಾರಿಯಾಗಿ ಮತ್ತು ಕೆಲವೊಮ್ಮೆ ತಂದೆಯಿಂದ ಶಕ್ತಿಗಳನ್ನು ಬೇಡುವಂತಹ ರಾಯಲ್ ಬಿಕಾರಿಗಳು. ಬ್ರಾಹ್ಮಣರೆಂದರೆ ಸದಾ ಅಲೌಕಿಕ ಮೋಜಿನ ಜೀವನದಲ್ಲಿರುವವರು ಸದಾ ಅತ್ಮಿಕ ಚಹರೆ ಹಾಗೂ ಚಿತ್ರವಿರುವವರು ಕ್ಷತ್ರಿಯರೆಂದರೆ ಕೆಲವೊಮ್ಮೆ ಒಂದುರೀತಿ ಕೆಲವೊಮ್ಮೆ ಬೇರೆ ರೀತಿಯಲ್ಲಿ ಇರುವವರು ಆದ್ದರಿಂದ ತಮ್ಮೊಂದಿಗೆ ಕೇಳಿಕೊಳ್ಳಿರಿ- ನಾನು ಯಾರು? ಕೆಲವೊಮ್ಮೆ

ಬ್ರಾಹ್ಮಣ. ಕೆಲವೊಮ್ಮೆ ಕ್ಷತ್ರಿಯರೇ ಅಥವಾ ಸದಾ ಬ್ರಹ್ಮಣ ಜೀವನದ ವಿಶೇಷತೆಗಳಿಂದ ಸಂಪನ್ನವಾಗಿರುವವರೇ? ಲಕ್ಷ್ಯವಂತೂ ಬ್ರಾಹ್ಮಣ ಜೀವನದಲ್ಲಿರುವುದಾಗಿದೆ ಆದರೆ ಕೆಲವೊಮ್ಮೆ ಬ್ರಾಹ್ಮಣ. ಕೆಲವೊಮ್ಮೆ ಕ್ಷತ್ರಿಯ- ಇಂತಹ ಲಕ್ಷಣವಂತು ಇಲ್ಲ ತಾನೇ? ಲಕ್ಷ್ಯ ಹಾಗೂ ಲಕ್ಷಣವು ಸಮಾನವಾಗಿವೆಯೇ ಅಥವಾ ಅಂತರವಿದೆಯೇ? ಮಾತು ಹಾಗೂ ಕರ್ಮವು ಸಮಾನವಿದೆಯೇ ಅಥವಾ ಅಂತರವಿದೆಯೇ? ಎಲ್ಲರೂ ಬ್ರಹ್ಮಾಕುಮಾರ-ಬ್ರಹ್ಮಾಕುಮಾರಿ ಎಂದು ಕರೆಸಿಕೊಳ್ಳುತ್ತೀರಲ್ಲವೇ? ಅಥವಾ ಕ್ಷತ್ರಿಯರೆಂದು ಕರೆಸಿಕೊಳ್ಳುತ್ತೀರಾ? ಚಂದ್ರವಂಶಿಗಳೆಂದು ಕರೆಸಿಕೊಳ್ಳುವುದು ಇಷ್ಟವಿಲ್ಲ ಅಲ್ಲವೇ? ತಾವು ಚಂದ್ರವಂಶಿ ಆಗಿದ್ದೀರಿ ಎಂದರೆ ಇಷ್ಟವಾಗುವುದೇ? ಇಲ್ಲ ಹಾಗಾದರೆ ಕರ್ಮ ಏನಾಗಿದೆ ಯಾವ ಸಮಯದಲ್ಲಿ ಯುದ್ಧದಲ್ಲಿ ತೊಡಗುತ್ತೀರೋ ಆ ಸಮಯದ ಭಾವಚಿತ್ರವನ್ನು ತೆಗೆದುಕೊಳ್ಳಿರಿ ತಮ್ಮ ಭಾವಚಿತ್ರ ತೆಗೆದುಕೊಳ್ಳುವ ಬಹಳ ಆಸಕ್ತಿಯಿದೆಯಲ್ಲವೆ ಆದ್ದರಿಂದ ತಮ್ಮ ಭಾವಚಿತ್ರವನ್ನು ತೆಗೆದುಕೊಳ್ಳುವುದು ಬರುತ್ತದೆಯೇ ಅಥವಾ ಅನ್ಯರದನ್ನು ತೆಗೆದುಕೊಳ್ಳುವುದು ಬರುತ್ತದೆಯೇ? ನಾನು ಯಾರಾಗಿದ್ದೇನೆ- ಈ ತಮ್ಮ ಭಾವಚಿತ್ರವನ್ನು ತೆಗೆದುಕೊಳ್ಳಿರಿ. ಒಂದುವೇಳೆ ಯಾರದೇ ಭಾವಚಿತ್ರವು ಚೆನ್ನಾಗಿ ಬರದಿದ್ದರೆ ಇಷ್ಟಪಡುವುದಿಲ್ಲ ಅಲ್ಲವೇ? ಅಂದಮೇಲೆ ಇಡೀ ದಿನದಲ್ಲಿ ಅಥವಾ ಎಷ್ಟು ಸಾರಿ ಸಮಯ-ಸಮಯದಲ್ಲಿ ಬ್ರಾಹ್ಮಣನಿಗೆ ಬದಲಾಗಿ ಕ್ಷತ್ರಿಯರಾಗುತ್ತೀರಿ ಎಂಬುದನ್ನು ಪರಿಶೀಲನೆ ಮಾಡಿರಿ ಮತ್ತು ಪರಿವರ್ತನೆಯನ್ನೂ ಮಾಡಿಕೊಳ್ಳಿರಿ. ಕೇವಲ ಪರಿಶೀಲನೆ ಮಾಡುವುದಲ್ಲ ಪರಿಶೀಲನೆ ಮಾಡುವುದೇ ಪರಿವರ್ತನೆಯಾಗಲು ಅಂದಮೇಲೆ ಎಲ್ಲರಲ್ಲಿ ಪರಿವರ್ತನಾ ಶಕ್ತಿಯಿದೆಯೇ? ಅಥವಾ ಕೆಲವರ ಬಳಿ ಇಲ್ಲವೇ? ಎಲ್ಲರ ಬಳಿಯಿದೆ- ಇದಂತು ಬಹಳ ಒಳ್ಳೆಯ ಖುಷಿಯ ಮಾತಾಗಿದೆ ಈಗ ಸಮಯಕ್ಕೆ ಕಾರ್ಯದಲ್ಲಿ ಉಪಯೋಗಿಸುವುದು ಬರುತ್ತದೆಯೇ ಅಥವಾ ಫರಿಶ್ತಾ ಆಗಲೇಬೇಕು ಅಲ್ಲವೇ? ಅಥವಾ ಫರಿಶ್ತೆಯಾಗುವುದು ಕಷ್ಟವೇ? ಸಹಜವೇ ಅಥವಾ ಕಷ್ಟವೇ? ಅಥವಾ ಕೆಲವೊಮ್ಮೆ ಕಷ್ಟ, ಕೆಲವೊಮ್ಮೆ ಸಹಜವೇ ಫರಿಶ್ತಾ ಸ್ವರೂಪದ ವಿಶೇಷತೆ ಎಲ್ಲರಿಗೂ ತಿಳಿದಿದೆ ಫರಿಶ್ತಾ ಅರ್ಥಾತ್ ಡಬಲ್ ಲೈಟ್ ನಿಮಗೆ ತಿಳಿದಿದೆಯಲ್ಲವೇ? ಹಾಗಾದರೆ ಡಬಲ್ ಲೈಟ್ ಆಗಿದ್ದೀರಾ? ಅಥವಾ ಕೆಲವೊಮ್ಮೆ ಹೊರೆಯನ್ನು ಹೊತ್ತುಕೊಳ್ಳುವಂತಹ ಮನಸ್ಸಾಗಿ ಹೊರುತ್ತೀರಾ? ಹೊರೆಯನ್ನು ಹೊರಬೇಕು ಎಂದು ಬಯಸದಿದ್ದರೂ ಮಾಯೆ ನಿಮ್ಮ ತಲೆಯ ಮೇಲೆ ಇಡುತ್ತಿದೆಯೇ ಮಾಯೆ ತನ್ನ ಕೃತ್ರಿಮ, ಅಲ್ಪಕಾಲದ ಶಕ್ತಿಯನ್ನು ಈ ವಿಧವಾಗಿ ತೋರಿಸುತ್ತದೆ ಹೊರೆಯನ್ನು ಹೊರಬೇಕೆಂದುಕೊಳ್ಳದಿದ್ದರೂ ಹೊತ್ತುಕೊಂಡು ಬಿಟ್ಟೆವು. ಏಕೆಂದರೆ ಬಲಹೀನವಾಗಿರುವ ಕಾರಣ, ಬಲಹೀನರು ಪರಾಧೀನವಾಗುತ್ತಾರೆ . ಅದೇ ರೀತಿ ಮಾಯೆ ಕೂಡ ಅಧೀನ ಮಾಡಿಕೊಳ್ಳುತ್ತದೆ. ಅಧಿಕಾರಿ ಸ್ಥಿತಿಯನ್ನು ಮರೆತು ಅಧೀನರಾಗಿಬಿಡುತ್ತಾರೆ. ಆಗ ಅವರ ಭಾಷೆ ಏನಾಗಿರುತ್ತದೆ? ಬಯಸಿರಲಿಲ್ಲ ಆದರೂ ಆಗಿಬಿಡುತ್ತಿದೆ. ಗೊತ್ತಿಲ್ಲ, ಪ್ರತೀ ಮಾತಿನಲ್ಲಿಯೂ ಗೊತ್ತಿಲ್ಲ, ಗೊತ್ತಿಲ್ಲ ಎನ್ನುತ್ತಿರುತ್ತಾರೆ. ಅಧಿಕಾರಿ ಅರ್ಥಾತ್ ಸದಾ ಸ್ವತಂತ್ರ ಮತು ಅಧೀನ ಅರ್ಥಾತ್ ಸದಾ ಪರವಶ ಹಾಗಾದರೆ ಪರವಶರೆಂದಿಗೂ ಮೋಜಿನ ಜೀವನದಲ್ಲಿರಲು ಸಾಧ್ಯವಿಲ್ಲ. ಬ್ರಾಹ್ಮಣನೆಂದರೆ ಮೋಜಿನ ಜೀವನ ಒಂದುವೇಳೆ ಯಾವುದೇ ಸಮಯದಲ್ಲಾದರೂ, ಮೋಜಿಗೆ ಬದಲಾಗಿ ಇದೇನು, ಇದು ಹೇಗೆ, ಇದೇ ಆಗುತ್ತದೆಯೇ ಹೀಗೆ ಗೊಂದಲದಲ್ಲಿದ್ದರೆ ಇದು ಮಜಾದ ಬದಲು ಗೊಂದಲದ ಜೀವನವಾಗಿದೆ. ಒಂದುವೇಳೆ ಯಾವುದೇ ಸಮಯದಲ್ಲಿ ಕೊರತೆಯ ಅನುಭವ ಮಾಡುತ್ತಿದ್ದರೆ ಪುನಃ ಈ ಪಾಠವನ್ನು ಮೊದಲು ನೆನಪು ಮಾಡಿಕೊಳ್ಳಿರಿ- ನಾನು

ಯಾರು? ಕೇವಲ ಆತ್ಮ ಅಲ್ಲ ಆದರೆ ಎಂತಹ ಅತ್ಮನಾಗಿದ್ದೇನೆ? ಇದರ ಎಷ್ಟು ಉತ್ತರಗಳು ಬರುತ್ತವೆ? ಉದ್ದವಾದ ಪಟ್ಟಿಯೇ ಇದೆಯಲ್ಲವೆ! ಪ್ರತಿನಿತ್ಯ ಮುರಳಿಯಲ್ಲಿ 'ನಾನು ಯಾರು' ಇದರ ಭಿನ್ನ-ಭಿನ್ನ ಪಾಠವನ್ನು ಓದುತ್ತಿರುತ್ತೀರಿ. ಆಲಿಸುತ್ತೀರಿ.

ಅಂದಮೇಲೆ ಫರಿಶ್ತಾ ಅರ್ಥಾತ್ ಡಬಲ್‌ಲೈಟ್, ಲೈಟ್ ಅರ್ಥಾತ್ ಹಗುರತೆ, ಹಗುರತೆಯ ಅರ್ಥವೇನೆಂದರೆ ಕೇವಲ ಪರಿಸ್ಥಿತಿಗಳ ಸಮಯದಲ್ಲಷ್ಟೇ ಹಗುರವಾಗಿರುವುದು ಎಂದಲ್ಲ ಆದರೆ ಇಡೀ ದಿನದಲ್ಲಿ ಸ್ವಭಾವ. ಸಂಸ್ಕಾರ, ಸಂಬಂಧ, ಸಂಪರ್ಕದಲ್ಲಿ ಹಗುರವಾಗಿದ್ದೇನೆಯೇ? ಹಾಗೆನೋಡಿದಾಗ ಸರಿಯಿದೆ ಆದರೆ ಸ್ವಭಾವ- ಸಂಸ್ಕಾರಗಳಲ್ಲಿಯೂ ಒಂದುವೇಳೆ ಹಗುರತೆಯಿಲ್ಲದಿದ್ದರೆ ಫರಿಶ್ತೆಯೆಂದು ಹೇಳುವರೇ? ಮತ್ತು ಹಗುರತೆಯ ಚಿಹ್ನೆ- ಹಗುರವಾದ ವಸ್ತುವು ಎಲ್ಲರಿಗೂ ಪ್ರಿಯವಾಗುತ್ತದೆ. ಯಾರಾದರೂ ತಮಗೆ ಭಾರವಾದ ವಸ್ತು ಕೊಟ್ಟರೆ ಇಷ್ಟಪಡುವಿರಾ? ಮತ್ತು ಹಗುರವಾದ ಶ್ರೇಷ್ಠವಾದ ವಸ್ತುವಾಗಿದ್ದರೆ ಇಷ್ಟಪಡುವಿರಲ್ಲವೇ? ಅದೇರೀತಿ ಈ ಸ್ವಭಾವ, ಸಂಸ್ಕಾರ, ಸಂಬಂಧ, ಸಂಪರ್ಕದಲ್ಲಿಯೂ ಯಾರು ಹಗುರವಾಗಿರುತ್ತಾರೆಯೋ ಅವರ ಚಿಹ್ನೆಯೇನೆಂದರೆ  ಅವರು ಸರ್ವರ ಪ್ರಿಯ ಹಾಗೂ ಅತೀತವಾಗಿರುತ್ತಾರೆ ಏಕೆಂದರೆ ಇದು ಬ್ರಾಹ್ಮಣರ ಸ್ವಭಾವವಾಗಿದೆ. ಬೇರೆ ಸ್ವಭಾವವಲ್ಲ. ಬ್ರಾಹ್ಮಣ ಅರ್ಥಾತ್ ಎಲ್ಲರ ಹೃದಯಕ್ಕೆ ಪ್ರಿಯವಾದ ಸ್ವಭಾವ-ಸಂಸ್ಕಾರ ಅಥವಾ ಸಂಬಂಧ-ಸಂಪರ್ಕದವರಾಗಬೇಕು. ಮೆಜಾರಿಟಿ 95% ಅವಶ್ಯವಾಗಿ ಹೃದಯಕ್ಕೆ ಪ್ರಿಯರಾಗಬೇಕು. ಇಷ್ಟು ಫಲಿತಾಂಶವಂತೂ ಅವಶ್ಯವಾಗಿ ಇರಬೇಕು. 5% ಈಗಲೂ ಅವಕಾಶವನ್ನು ಕೊಡುತ್ತಿದ್ದೇವೆ. ಅಂತ್ಯದವರೆಗಲ್ಲ ಆದರೆ ಈಗ ಕೊಡುತ್ತಿದ್ದೇವೆ. 95% ಸರ್ವರ ಹೃದಯದ ಪ್ರಿಯ ಅರ್ಥಾತ್ ಸರ್ವರಿಂದ ಹಗುರವಾಗಿರುವುದು, ಮತ್ತು ಆ ಹಗುರವಾದ ಮಾತು, ಕರ್ಮ ಹಾಗೂ ವೃತ್ತಿಯಿಂದ ಅನುಭವವಾಗಲಿ, ನಾನಂತು ಹಗುರವಾಗಿದ್ದೇನೆ ಆದರೆ ಅನ್ಯರು ನನ್ನನ್ನು ಅರ್ಥ ಮಾಡಿಕೊಳ್ಳುವುದೇ ಇಲ್ಲ. ಗುರುತಿಸುವುದೇ ಇಲ್ಲ ಎನ್ನುವಂತಾಗಬಾರದು. ಒಂದುವೇಳೆ ಅವರು ಗುರುತಿಸುತ್ತಿಲ್ಲವೆಂದರೆ ತಾವು  ತಮ್ಮ ಆತ್ಮವಿಶ್ವಾಸದಿಂದ ಅವರಿಗೂ ಗುರುತಿಸುವಂತೆ ಮಾಡಿರಿ. ತಮ್ಮ ಕರ್ಮ, ವೃತ್ತಿಯು ಅವರನ್ನೂಪರಿವರ್ತನೆ ಮಾಡಲಿ. ಇದರಲ್ಲಿ ಕೇವಲ ಪರಿವರ್ತನೆ ಮಾಡುವುದರಲ್ಲಿ ಸಹನಶಕ್ತಿಯ ಅವಶ್ಯಕತೆಯಿರುತ್ತದೆ. ಮತ್ತು ಫರಿಶ್ತಾ ಅರ್ಥಾತ್ ಹಳೆಯ ದೇಹ ಮತ್ತು ಹಳೆಯ ದೇಹದೊಂದಿಗೆ ಸಂಬಂಧವೇ ಇಲ್ಲದಿರುವವರು. ಇದು ಎಲ್ಲರಿಗೂ ನೆನಪಿದೆಯಲ್ಲವೇ? ಅಥವಾ ಈಗಲೂ ಹಳೆಯದು ಉಳಿದುಕೊಂಡಿದೆಯೇ? ಹಳೆಯ ದೇಹದೊಂದಿಗೆ ಸೆಳೆತವಿದೆಯೇ? ದೇಹದ ಸಂಬಂಧದಿಂದ ಹಗುರವಾಗಿದ್ದೀರಾ ಅಥವಾ ಇಲ್ಲವೇ? ಚಿಕ್ಕಪ್ಪ, ಚಿಕ್ಕಮ್ಮ, ಮಾಮಾ, ಅವರೆಲ್ಲರಿಂದಲೂ ಅತೀತವಾಗಿದ್ದೀರಲ್ಲವೇ? ಈಗಲೂ ಸಂಬಂಧವಿದೆಯೇ? ಅತೀತ ಹಾಗೂ ಪ್ರಿಯವಾಗಿದ್ದೀರಾ? ಪ್ರಿಯರಾಗಿದ್ದೀರಿ ಆದರೆ ಅತೀತವಾಗಿದ್ದು ಪ್ರಿಯರಾಗಬೇಕು. ಇದೇ ತಪ್ಪಾಗಿಬಿಡುತ್ತದೆ. ಆದರೆ ಅತೀತರಾಗುತ್ತಿದ್ದೀರಿ ಅಥವಾ ಪ್ರಿಯರಾಗುತ್ತಿದ್ದೀರಿ. ಆದರೆ ಈ ದೇಹದ ಸಂಬಂಧಗಳಾದ ಚಿಕ್ಕಪ್ಪ, ಚಿಕ್ಕಮ್ಮ, ಮಾಮಾ. ಇದಾದರೂ ಸಹಜವಿದೆ. ಸಹಜವೇ ಅಥವಾ ಸ್ವಲ್ಪ-ಸ್ವಲ್ಪ ಸ್ವಪ್ನದಲ್ಲಿ, ಸಂಕಲ್ಪದಲ್ಲಿಯೂ ಬಂದುಬಿಡುತ್ತದೆಯೇ? ಬ್ರಾಹ್ಮಣ ಪರಿವಾರದಲ್ಲಿ ಯಾವುದೇ ಪರಿಸ್ಥಿತಿಗಳು ಬಂದರೆ ಚಿಕ್ಕಪ್ಪ, ಚಿಕ್ಕಮ್ಮ, ಮಾಮಾ ನೆನಪಿಗೆ ಬರುತ್ತಾರೆಯೇ? ಬಾಪ್‌ದಾದಾರವರು ನೋಡಿದರು ಪರಿಸ್ಥಿತಿಯ ಸಮಯ ಕೆಲವು ಅತ್ಮರಿಗೆ ಬ್ರಾಹ್ಮಣ ಪರಿವಾರಕ್ಕೆ ಬದಲಾಗಿ ಲೌಕಿಕ ಸಂಬಂಧವು ಬಹಳಬೇಗನೆ ನೆನಪಿಗೆ ಬರುತ್ತಿದೆ. ಪರಿಸ್ಥಿತಿಗಳು ದೂರ ಮಾಡುರುವುದನ್ನು ಆಶ್ರಯವನ್ನಾಗಿ ಅನುಭೂತಿ

ಮಾಡಿಸುತ್ತದೆ. ಮರುಜೀವಾ ಜನ್ಮದವರಾದ ಮೇಲೆ ಹಿಂದಿನ ಜನ್ಮದ ಸಂಬಂಧಿಗಳಾದ ಚಿಕ್ಕಪ್ಪ, ಚಿಕ್ಕಮ್ಮ, ಅಮ್ಮ, ಅಪ್ಪನ ನೆನಪಿರುತ್ತದೆಯೇ? ಸ್ವಪ್ನದಲ್ಲಾದರೂ ಬರುವುದೇ? ಹಾಗಾದರೆ ಸಂಬಂಧ ಬದಲಾಯಿತು ಮತ್ತು ಜನ್ಮವೇ ಬದಲಾಯಿತಲ್ಲವೆ. ಫರಿಶ್ತಾ ಅರ್ಥಾತ್ ಹಳೆಯದರೊಂದಿಗೆ ಯಾವುದೇ ಸಂಬಂಧವಿರುವುದಿಲ್ಲ ಎಂಬ ಪರಿಭಾಷೆಯನ್ನೇ ಹೇಳುತ್ತೀರಲ್ಲವೇ? ಆದರೂ ಸಮಯಕ್ಕೆ ಎಲ್ಲಿಂದ ಬಂದುಬಿಡುತ್ತಾರೆ? ದೂರವಾಗಿರುವ ಸಂಬಂಧವು ಹೇಗೆ ಜೋಡಣೆಯಾಗಿಬಿಡುತ್ತದೆ? ಸತ್ತುಹೋಗಿರುವುದು ಮತ್ತೆ ಹೇಗೆ ಬದುಕಿಬಿಡುತ್ತದೆ? ಫರಿಶ್ತಾ ಅರ್ಥಾತ್ ಹಳೆಯದರೊಂದಿಗೆ ಸಂಬಂಧವೇ ಇಲ್ಲ. ಎಲ್ಲವೂ ಹೊಸದಾಗಿರುವುದು. ಫರಿಶ್ತೆಯಾಗುವುದರಲ್ಲಿ ಯಾವ ಅಡಚಣೆ ಆಗುತ್ತದೆಯೋ ಅದರ ಕಾರಣವನ್ನು ಬಾಪ್‌ದಾದಾರವರು ನೋಡಿದರು- 1. ದೇಹ ಭಾನವನ್ನು ಬಿಡುವುದು. 2. ಸೂಕ್ಷ್ಮ ವಾದ ದೇಹಾಭಿಮಾನವನ್ನು ಬಿಡುವುದು. ದೇಹ ಭಾನ ಹಾಗೂ ದೇಹ ಅಭಿಮಾನ, ದೇಹ ಭಾನವಾದರೂ ಸಾಮಾನ್ಯವಾದ ವಸ್ತುವಾಗಿದೆ ಆದರೆ ಎಷ್ಟೆಷ್ಟು ಜ್ಞಾನಿ ಆತ್ಮ, ಯೋಗಿ ಆತ್ಮರಾಗುತ್ತಾರೆಯೋ ಅಷ್ಟು ದೇಹಾಭಿಮಾನವು ವಿಘ್ನವನ್ನುಂಟುಮಾಡುತ್ತದೆ ಮತ್ತು ಅಭಿಮಾನವಂತು ಅನೇಕ ಪ್ರಕಾರದಲ್ಲಿ ಬರುತ್ತದೆ- ತನ್ನ ಬುದ್ಧಿಯ ಅಭಿಮಾನ, ತನ್ನ ಶ್ರೇಷ್ಠ ಸಂಸ್ಕಾರದ ಅಭಿಮಾನ, ತನ್ನ ಒಳ್ಳೆಯ ಸ್ವಭಾವದ ಅಭಿಮಾನ, ತನ್ನ ವಿಶೇಷತೆಗಳ ಅಭಿಮಾನ, ತನ್ನ ಯಾವುದೇ ವಿಶೇಷ ಕಲೆಯ ಅಭಿಮಾನ, ತನ್ನ ಸೇವಾ ಸಫಲತೆಯ ಅಭಿಮಾನ ಈ ರೀತಿ ಸೂಕ್ಷ್ಮ ಅಭಿಮಾನವು ದೇಹ ಭಾನಕ್ಕಿಂತಲೂ ಬಹಳ ಸೂಕ್ಷ್ಮವಾಗಿ ಇದೆ. ಅಭಿಮಾನದ ದ್ವಾರವು ಗೊತ್ತಿದೆ ಅಲ್ಲವೇ? ನಾನು, ನನ್ನತನವೇ ಅಭಿಮಾನದ ದ್ವಾರವಾಗಿದೆ. ಅಂದಮೇಲೆ ಫರಿಶ್ತೆಯೆಂದರೆ ಕೇವಲ ದೇಹಭಾನ ಅಥವಾ ದೇಹದ ಆಕರ್ಷಣೆಯಿಂದ ದೂರವಾಗುವುದು, ದೇಹದ ಸ್ಥೂಲ ಸಂಬಂಧದಿಂದ ದೂರವಾಗುವುದೇ ಅಲ್ಲ ಆದರೆ ಫರಿಶ್ತೆ ಎಂದರೆ ದೇಹದ ಸೂಕ್ಷ್ಮ ಅಭಿಮಾನದ ಸಂಬಂಧದಿಂದಲೂ ಅತೀತವಾಗುವುದು. ಮತ್ತು ಅಭಿಮಾನದ ಚಿಹ್ನೆಯಾಗಿದೆ- ಎಲ್ಲಿ ಅಭಿಮಾನವಿರುವುದೋ ಅಲ್ಲಿ ಅಪಮಾನವೂ ಬಹಳಬೇಗನೆ ಫೀಲ್ ಆಗುತ್ತದೆ ಏಕೆಂದರೆ 'ನಾನು' ಮತ್ತು 'ನನ್ನದು' ಇವೆರಡರ ದ್ವಾರ ತೆರೆದಿರುತ್ತದೆ ಫರಿಶ್ತೆಯ ಯಥಾರ್ಥ ಸ್ವರೂಪವಾಗಿದೆ- ದೇಹಭಾನ ಮತ್ತು ದೇಹ ಸಂಬಂಧದಿಂದ, ದೇಹದ ಅಭಿಮಾನದಿಂದ ಅತೀತವಾಗುವುದು. ಒಂದುವೇಳೆ ಯಾವುದೇ ಗುಣ. ಯಾವುದೇ ಶಕ್ತಿಯಿದ್ದರೆ ದಾತನನ್ನೇಕೆ ಮರೆತುಹೋಗುತ್ತೀರಿ? ಮತ್ತೊಂದು ಮಾತು- ಇದಕ್ಕಿಂತಲೂ ಸಹಜವಾಗಿ ಅತೀತರಾಗುವ ಮಾರ್ಗ ಅಥವಾ ವಿಧಿಯು ಬಹಳ ಸಹಜವಾಗಿದೆ. ಒಂದು ವಿಷಯವಿದೆ. ಆ ಒಂದು ಮಾತಿನಲ್ಲಿ ಎಷ್ಟು ಶಕ್ತಿಯಿದೆ ಎಂದರೆ ಅದು ದೇಹ ಅಭಿಮಾನ ಹಾಗೂ ದೇಹ ಭಾನವನ್ನು ಸದಾಕಾಲಕ್ಕಾಗಿ ಸಮಾಪ್ತಿ ಮಾಡಿಬಿಡುತ್ತದೆ. ಆ ಒಂದು ಶಬ್ದವು ಯಾವುದು? ಮಾಡಿ-ಮಾಡಿಸುವಂತಹ ತಂದೆಯು ಮಾಡಿಸುತ್ತಿದ್ದಾರೆ. 'ಮಾಡಿ-ಮಾಡಿಸುವವರು' ಶಬ್ಧವು ದೇಹಭಾನ ಹಾಗೂ ಅಭಿಮಾನವೆರಡನ್ನೂ ಅಳಿಸಿಬಿಡುತ್ತದೆ. ಒಂದು ಶಬ್ಧವನ್ನು ನೆನಪಿಡುವುದು ಸಹಜವಲ್ಲವೇ? ಮತ್ತೆಲ್ಲಾ ಪಾಯಿಂಟ್‌ಗಳನ್ನು ಮರೆತುಬಿಡಿ. ಮರೆಯಬಾರದು ಆದರೆ ಒಂದುವೇಳೆ ಮರೆತರೂ ಈ ಒಂದು ಮಾತನ್ನಂತೂ ನೆನಪಿಟ್ಟುಕೊಳ್ಳಬಹುದಲ್ಲವೇ? ಮಾಡಿ-ಮಾಡಿಸುವವರು ತಂದೆಯವರಾಗಿದ್ದಾರೆ. ಆಗ ನೋಡಿ, ಫರಿಶ್ತೆಯ ಜೀವನದ ಅನುಭವವು ಎಷ್ಟೊಂದು ಸಹಜವಾಗಿ ಅನುಭವವಾಗುವುದು ಎಂದು ಬ್ರಹ್ಮಾತಂದೆಯು ಫರಿಶ್ತೆಯಾದರು- ಅದರ ಆಧಾರದಿಂದಲೇ ಸದಾ ಮಾಡಿ-ಮಾಡಿಸುವವರ ಸ್ಮೃತಿಯಿಂದ ಸಮರ್ಥರಾಗಿ ಫರಿಶ್ತೆಯಾದರು. ಫಾಲೋ ಫಾದರ್ ಮಾಡುತ್ತೀರಲ್ಲವೇ? ಅಥವಾ ಪಾಲೋ ಮಾಯೆಯೇ? ಕೆಲವೊಮ್ಮೆ ಮಾಯೆಯೂ ಮದರ್ ಫಾದರ್ ಆಗಿಬಿಡುತ್ತದೆ, ಬಹಳ

ಒಳ್ಳೆಯ ಪಾಲನೆ ಮತ್ತು ಪ್ರಾಪ್ತಿ ಮಾಡಿಸುತ್ತದೆ ಆದರೆ ಅವೆಲ್ಲವೂ ಮೋಸದ ಪ್ರಾಪ್ತಿಗಳಾಗಿವೆ. ಮೊದಲು ಪ್ರಾಪ್ತಿಯಿರುತ್ತದೆ. ನಂತರ ಮೋಸ, ಪರಿಶೀಲನಾ ಶಕ್ತಿಯಂತು ಇದೆಯಲ್ಲವೇ? ಇದು ಮಾಯೆಯೇ ಅಥವಾ ತಂದೆಯಾಗಿದ್ದಾರೆಯೇ ಎನ್ನುವುದನ್ನು ಸಮಯಕ್ಕೆ ಪರಿಶೀಲನೆ ಮಾಡಬೇಕು. ಮೋಸವನ್ನು ಅನುಭವಿಸಿದ ನಂತರ ಪರಿಶೀಲಿಸುವುದು ಬುದ್ಧಿವಂತಿಕೆಯೇನಲ್ಲ. ಮೋಸವಾದ ನಂತರ ಎಲ್ಲರೂ ತಿಳಿಯುತ್ತಾರೆ ಆದರೆ ಜ್ಞಾನಿ ಆತ್ಮರು ಮೊದಲು ಇದನ್ನು ಪರಿಶೀಲನೆ ಮಾಡುತ್ತಾ ಸ್ವಯಂನ್ನು ಪಾರು ಮಾಡಿಕೊಳ್ಳುತ್ತಾರೆ. ಹಾಗಾದರೆ ಫರಿಶ್ತೆ ಎಂದು ಯಾರಿಗೆ ಹೇಳಲಾಗುತ್ತದೆ ಎನ್ನುವುದು ತಿಳಿಯಿತೆ?

ಮೂರನೆಯದು - ಫರಿಶ್ತೆಯಿಂದ ದೇವತೆ. ಈಗ ದೇವತೆಯಾಗಬೇಕಾ ಅಥವಾ ಭವಿಷ್ಯದಲ್ಲಾಗುವಿರೇ? **ದೇವತೆ ಅರ್ಥಾತ್ ಸರ್ವಗುಣಗಳಿಂದ ಶೃಂಗರಿತರಾಗಿರುವುದು. ಈ ದಿವ್ಯಗುಣಗಳು ಸಂಗಮದ ದೇವತಾ ಜೀವನದ ಶೃಂಗಾರವಾಗಿದೆ. ಈ ಸಮಯದಲ್ಲಿ ದಿವ್ಯಗುಣಗಳಿಂದ ಶೃಂಗರಿತರಾಗಿ ಇದ್ದಾಗಲೇ ಭವಿಷ್ಯದಲ್ಲಿ ಸ್ಥೂಲ ಶೃಂಗಾರದ ಶೋಭೆಯಿಂದ ಕೂಡಿರುತ್ತೀರಿ. ಹಾಗಾದರೆ ದೇವತೆ ಅರ್ಥಾತ್ ದಿವ್ಯಗುಣಗಳಿಂದ ಶೃಂಗರಿಸಲ್ಪಟ್ಟಿರುವವರು ಇನ್ನೊಂದು ದೇವತೆ ಅರ್ಥಾತ್ ಕೊಡುವವರು ತೆಗೆದುಕೊಳ್ಳುವವರಲ್ಲ. ಹಾಗಾದರೆ ಮಾಸ್ಟರ್ ದಾತಾ ಆಗಿದ್ದೀರಾ? ಅಥವಾ ಕೆಲವೊಮ್ಮೆ ತೆಗೆದುಕೊಳ್ಳುವವರು ಕೆಲವೊಮ್ಮೆ ಕೊಡುವವರೇ? ಪರಿಶೀಲನೆ ಮಾಡಿಕೊಳ್ಳಿರಿ- ದಿವ್ಯ ಗುಣಗಳ ಶೃಂಗಾರವು ಸದಾ ಇರುತ್ತದೆಯೇ ಅಥವಾ ಕೆಲವೊಮ್ಮೆ ಕೆಲವು ಶೃಂಗಾರವು ಮರೆತುಹೋಗುತ್ತದೆಯೇ? ಸಂಪೂರ್ಣ ಸರ್ವಗುಣ ಸಂಪನ್ನ. ಇದೇ ದೇವತಾ ಜೀವನದ ಸಂಕೇತವಾಗಿದೆ. ಈ ಗುಣವೇ ಆಭರಣಗಳಾಗಿವೆ. ಬ್ರಾಹ್ಮಣ ಸ್ವರೂಪದ ಸರ್ವಶಕ್ತಿಗಳು, ಫರಿಶ್ತಾ ಸ್ವರೂಪದ ಡಬಲ್ ಲೈಟ್ ಸ್ಥಿತಿ ಹಾಗೂ ದೇವತಾ ಸ್ವರೂಪದ ದಾತಾತನದ ಚಿಹ್ನೆ ಮತ್ತು ದಿವ್ಯಗುಣಗಳಿಂದ ಸಂಪನ್ನನಾಗಿದ್ದೇನೆಯೇ? ಎಂದು ನಿಮ್ಮನ್ನು ನೀವು ನೋಡಿಕೊಳ್ಳಿರಿ** ಮೂರೂ ಸ್ವರೂಪಗಳ ಅನುಭವ ಮಾಡುತ್ತೀರಾ? ಹೇಗೆ ತಂದೆಯವರು ಮೂರು ಸಂಬಂಧಗಳಾದ ತಂದೆ, ಶಿಕ್ಷಕ, ಸದ್ಗುರು ಎಂಬುದು ಸದಾ ನೆನಪಿರುತ್ತದೆಯೋ ಅದೇರೀತಿ ಈ ಮೂರು ಸ್ವರೂಪಗಳನ್ನು ಸದಾ ನೆನಪಿಟ್ಟುಕೊಳ್ಳಿರಿ. ತಿಳಿಯಿತೆ? ತಾವೇ ಆಗಬೇಕೋ ಅಥವಾ ಮತ್ಯಾರಾದರೂ ಬರುವವರಿದ್ದಾರೆಯೇ? ತಾವೇ ಆಗಬೇಕಲ್ಲವೇ? ಇಂದು ಬ್ರಾಹ್ಮಣ, ನಾಳೆ ಫರಿಶ್ತಾ ಮತ್ತು ನಾಡಿದ್ದು ದೇವತಾ. ತಮ್ಮ ಫರಿಶ್ತಾ ಸ್ವರೂಪವನ್ನು ಜ್ಞಾನದ ದರ್ಪಣದಲ್ಲಿ ನೋಡಿಕೊಳ್ಳಿರಿ. ಫರಿಶ್ತೆಯು ಸದಾ ಹಾರುತ್ತಾ ಇರುತ್ತದೆ ಹಾಗೂ ಸಂದೇಶವನ್ನು ಕೊಡುತ್ತಿರುತ್ತದೆ. ಫರಿಶ್ತೆಯು ಬಂದು, ಸಂದೇಶ ಕೊಟ್ಟು ನಂತರ ಹಾರಿಬಿಡುತ್ತದೆ ಹಾಗಾದರೆ ಆ ಫರಿಶ್ತೆಯು ಯಾರು? ತಾವೇ ಆಗಿದ್ದೀರಲ್ಲವೇ? ನಾವೇ ಆಗಿದ್ದೆವು. ನಾವೇ ಆಗಿದ್ದೇವೆ ಮತು ನಾವೇ ಆಗಿರುತ್ತೇವೆ ಎಂದು ನಶೆಯಿಂದ ಹೇಳಿರಿ. ಇದು ಪರಿಪಕ್ವವಲ್ಲವೇ? ಇದಕ್ಕೇ ನಿಶ್ಚಯಬುದ್ಧಿ ವಿಜಯಿ ಎಂದು ಹೇಳಲಾಗುತ್ತದೆ. ಕ್ಷತ್ರಿಯರೇ ಅಥವಾ ವಿಜಯಗಳೇ? ಯಾರಾದರೂ ಕ್ಷತ್ರಿಯರಾಗುವಿರಾ? ಅದು ಅನ್ಯರಾಗುವರು. ತಾವಂತೂ ಬ್ರಾಹ್ಮಣರಾಗಿದ್ದೀರಿ. ನಡೆಯುತ್ತಾ-ನಡೆಯುತ್ತಾ ಎಂದಿಗೂ ಕ್ಷತ್ರಿಯರಾಗಬಾರದು. ಒಂದುವೇಳೆ ಮತ್ತೆ-ಮತ್ತೆ ಕ್ಷತ್ರಿಯರಾಗುತ್ತಾ, ಯುದ್ಧ ಮಾಡುತ್ತಾ ಇದ್ದರೆ ಯುದ್ಧ ಸಂಸ್ಕಾರವನ್ನು ತೆಗೆದುಕೊಂಡು ಹೋಗುವವರು ಎಲ್ಲಿಗೆ ತಲುಪುತ್ತಾರೆ? ಚಂದ್ರವಂಶಿಯಲ್ಲಿಯೇ ಅಥವಾ ಸೂರ್ಯವಂಶಯಲ್ಲಿಯೇ? ಹಾಗಾದರೆ ಚಂದ್ರವಂಶಿಯಂತು ಇಷ್ಟವಿಲ್ಲ ಅಲ್ಲವೇ ಅಥವಾ ಕೆಲಕೆಲವೊಮ್ಮೆ ಆದರೆ

ಪರವಾಗಿಲ್ಲವೇ? ಹಾಗಾದರೆ ಎಲ್ಲರೂ ಯಾರಾಗಿದ್ದೀರಿ? ಬ್ರಾಹ್ಮಣರಾ? ಪರಿಪಕ್ವ ಬ್ರಾಹ್ಮಣರಾಗಿದ್ದೀರಾ ಅಥವಾ ಸ್ವಲ್ಪ-ಸ್ವಲ್ಪ ಕಚ್ಚಾ ಆಗಿರುವಿರಾ? ಶಕ್ತಿಯರು ಪರಿಪಕ್ವವೇ? ಪಾಂಡವರು ಪರಿಪಕ್ವವೇ? ಒಂದುವೇಳೆ ಪರಿಪಕ್ವವಾಗಿದ್ದಾರೆ ಸದಾ ಖುಷಿಯ ಸಮಾಚಾರದ ಪತ್ರ ಬರಬೇಕು. ಮಾಯೆ ಬಂದಿತು, ಇದಾಯಿತು, ಗೊತ್ತಿಲ್ಲ ಏನಾಗಿಬಿಟ್ಟಿತು, ಹೇಗಾಯಿತು- ಇದು ಸಂಕಲ್ಪದಲ್ಲಿಯೂ ಇರಬಾರದು. ತಂದೆಯಂತು ಹೇಳುತ್ತಾರೆ- ಸ್ವಪ್ನದಲ್ಲಿಯೂ ಇರಬಾರದು, ಏಕೆ, ಏನೂ ಎನ್ನುವುದೂ ಇರಬಾರದು, ಈ ರೀತಿ ಪರಿಪಕ್ವವಾಗಿದ್ದೀರಾ? ಶಕ್ತಿಯರು ಮಹಾ ಪರಿಪಕ್ವವಾಗಿರುವವರು ಆಗಿದ್ದೀರಾ? ಪಾಂಡವರು ಪರಿಪಕ್ವವಾದರೆ ನಾವು ಮಹಾನ್ ಪರಿಪಕ್ವವಾಗಿ ಇರುವವರೆಂದು ಹೇಳಿರಿ. ಏಕೆಂದರೆ ಶಕ್ತಿಯರನ್ನೇ ನಿಮಿತ್ತರನ್ನಾಗಿ ಮಾಡಿದ್ದಾರೆ ಅಂದಾಗ ನಿಮಿತ್ತರಾಗಿರುವವರೇ ಕಚ್ಚಾ-ಪಕ್ಕಾ ಆಗಿದ್ದರೆ ಅನ್ಯರ ಗತಿಯೇನಾಗುವುದು! ಪಾಂಡವರು ಬೆನ್ನೆಲುಬಾಗಿದ್ದಾರೆ. ಬೆನ್ನೆಲುಬಾಗಿರುವುದು ಇಷ್ಟವಾಗುತ್ತದೆಯೇ? ಎದುರಿಸುವುದು ಇಷ್ಟವಾಗುತ್ತದೆಯೇ? ಬೆನ್ನೆಲುಬಾಗಿರುವುದು ಒಳ್ಳೆಯದು. ಬಹಳ ಸುರಕ್ಷಿತವಾಗಿದ್ದೀರಿ. ಇಲ್ಲದಿದ್ದರೆ ಪೆಟ್ಟು ಅನುಭವಿಸುತ್ತೀರಿ. ಒಳ್ಳೆಯದು-

ಎಲ್ಲರೂ ತಮ್ಮ ಮಧುರಮನೆಗೆ ತಲುಪಿದ್ದೀರಿ. ಹೋಗಬೇಕು, ಹೋಗಬೇಕು ಎಂಬ ಸಂಕಲ್ಪವಿತ್ತು, ಈಗ ಮತ್ತಾವ ಸಂಕಲ್ಪವಿದೆ? ಈಗಲೂ ಹೋಗಬೇಕಲ್ಲವೆ? ಸೇವಾರ್ಥವಾಗಿ ಹೋಗುತ್ತಿದ್ದೀರಿ ಆದ್ದರಿಂದ ಖುಷಿ-ಖುಷಿಯಾಗಿ ಹೊರಡುತ್ತೀರಿ ಸೇವೆಯಲ್ಲಿ ಹೋಗುತ್ತೀರಾ ಅಥವಾ ಅಂಗಡಿಗೆ ಅಥವಾ ಮನೆಗೆ ಹೋಗುತ್ತೀರಾ, ಕಛೇರಿಯಲ್ಲಿ ಹೋಗುತ್ತೀರಾ? ಭಲೆ ಏನಾದರೂ ಆಗಿರಲಿ ಆದರೆ ಎಲ್ಲವೂ ಸೇವಾ ಸ್ಥಾನವಾಗಿದೆ. ಸೇವಾಧಾರಿಗಳಿಗೆ ಪ್ರತೀ ಸ್ಥಾನವೂ ಸೇವೆಯ ಸ್ಥಾನವಾಗಿದೆ. ಅಂದಮೇಲೆ ಮಧುಬನಕ್ಕೆ ಬರುವುದು ಮತ್ತು ಒಲವು-ಉತ್ಸಾಹದ ಖಜಾನೆಯನ್ನು ತುಂಬಿಕೊಳ್ಳುವುದು, ಮತ್ತೆ ಸೇವೆಯಲ್ಲಿ ಹೋಗುವುದು, ಖುಷಿ- ಖುಷಿಯಾಗಿ ಹೋಗುತ್ತೀರಲ್ಲವೇ? ಅಥವಾ ವಿವಶತೆಯಿಂದ ಹೋಗುತ್ತೀರಾ? ಸೇವೆ ಎಂದರೆ ಖುಷಿ. ಲೆಕ್ಕಾಚಾರವಿದೆ. ಸಾಲ ತೀರಿಸುವುದಕ್ಕಾಗಿ ಹೋಗುತ್ತಿದ್ದೇವೆ ಅಂದುಕೊಳ್ಳಬಾರದು. ಕರ್ತವ್ಯವನ್ನು ಪೂರ್ಣಗೊಳಿಸುವುದಕ್ಕಾಗಿ ಹೋಗುತ್ತಿದ್ದೇವೆ. ಮನೆಯಲ್ಲಿ ಬಹಳಷ್ಟು ಕೊಕ್ಕರೆಗಳಿವೆ, ಒಂದುವೇಳೆ ಕೊಕ್ಕರೆ(ಅಜ್ಞಾನಿ)ಗಳು ಇಲ್ಲದಿದ್ದರೆ ಮತ್ತಾರಿಗೆ ಜ್ಞಾನ ಕೊಡುವಿರಿ? ಹಂಸವನ್ನು ಹಂಸವನ್ನಾಗಿ ಮಾಡುವಿರಾ? ಕೊಕ್ಕರೆಗಳನ್ನೇ ಹಂಸಗಳನ್ನಾಗಿಯಮಾಡುವಿರಲ್ಲವೇ? ಹಾಗಾದರೆ ಏನನ್ನು ನೆನಪಿಟ್ಟುಕೊಳ್ಳುವಿರಿ? ಬ್ರಾಹ್ಮಣರಿಂದ ಫರಿಶ್ತಾ ಫರಿಶ್ತೆಯಿಂದ ದೇವತೆ. ಪರಿಪಕ್ವವಾಗಿ ಇರುತ್ತೀರಲ್ಲವೇ? ಅಥವಾ ರೈಲಿನಲ್ಲಿ ಹೋಗುತ್ತಾ ಹೋಗುತ್ತಾ ಒಂದನ್ನು ಮರೆತುಬಿಡುವಿರಾ? ತಮ್ಮ ಸ್ಥಾನಕ್ಕೆ ಹೋಗುತ್ತಾ ಒಂದಷ್ಟೇ ಉಳಿದುಕೊಳ್ಳುವಂತೆ ಆಗುವುದಿಲ್ಲ ಅಲ್ಲವೇ? ಒಳ್ಳೆಯದು-

**ನಾಲ್ಕೂ ಕಡೆಯಲ್ಲಿರುವ ಬ್ರಾಹ್ಮಣರಿಂದ ಫರಿಶ್ತಾ, ಫರಿಶ್ತೆಯಿಂದ ದೇವತಾ, ಮೂರೂ ಸ್ವರೂಪಗಳ ಸ್ಮೃತಿದಲ್ಲಿರುವ ಎಲ್ಲಾ ಆತ್ಮರಿಗೆ, ಸದಾ ಒಂದು ಮಾತು 'ಮಾಡಿ-ಮಾಡಿಸುವವರು' ಎಂಬ ಸ್ಮೃತಿಯಿಂದ ತಮ್ಮನ್ನು ಡಬಲ್ ಲೈಟ್ ಮಾಡಿಕೊಳ್ಳುವಂತಹ ಶ್ರೇಷ್ಠ ಆತ್ಮರಿಗೆ, ಸದಾ ದೇವತಾ ಅರ್ಥಾತ್ ದಾತರಾಗಿ ಕೊಡುವಂತಹ, ಸರ್ವ ಖಜಾನೆಗಳಿಂದ ಸಂಪನ್ನ ಆತ್ಮರಿಗೆ, ಸದಾ ವರದಾನಗಳನ್ನು ಕರ್ಮದಲ್ಲಿ ಧಾರಣೆ ಮಾಡುವಂತಹ ಕರ್ಮಯೋಗಿ ಅತ್ಮರಿಗೆ ಬಾಪ್‌ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್ 23-12-1994.

***ತಮ್ಮ ಮೂರು ಸ್ವರೂಪವು ಸದಾ ಸ್ಮೃತಿಯಲ್ಲಿರಲಿ- 1.ಸಂಗಮಯುಗೀ ಬ್ರಾಹ್ಮಣ. 2.ಬ್ರಾಹ್ಮಣ ನಿಂದ ಫರಿಶ್ತಾ. 3.ಫರಿಶ್ತಾನಿಂದ ದೇವತೆ.***

ಕೆಲವೊಮ್ಮೆ ಬ್ರಾಹ್ಮಣರು, ಕೆಲವೊಮ್ಮೆ ಕ್ಷತ್ರಿಯರಾಗುತ್ತೀರಾ? ಲಕ್ಷ್ಯ ಹಾಗೂ ಲಕ್ಷಣವೂ ಸಮಾನವಾಗಿದೆಯೇ ಅಥವಾ ಅಂತರವಿದೆಯೇ? ಮಾತು ಹಾಗೂ ಕರ್ಮವು ಸಮಾನವಿದೆಯೇ ಅಥವಾ ಅಂತರವಿದೆಯೇ? ಶಕ್ತಿಗಳು ಸಮಯಾನುಸಾರ ಕಾರ್ಯದಲ್ಲಿ ಉಪಯೋಗಿಸಲು ಬರುತ್ತದೆಯೇ. ಇದು ಬ್ರಾಹ್ಮಣರ ಸ್ವರೂಪವಾಗಿದೆ. ಇನ್ನೊಂದು ಬ್ರಾಹ್ಮಣರಿಂದ ಫರಿಶ್ತಾ, ಫರಿಶ್ತಾ ಅರ್ಥಾತ್ ಡಬಲ್ ಲೈಟ್ ಅರ್ಥಾತ್ ಹಗುರತೆ. ಹಗುರತೆಯ ಅರ್ಥವೇನು ಎಂದರೆ ಕೇವಲ ಪರಿಸ್ಥಿತಿಗಳ ಸಮಯದಲ್ಲಷ್ಟೇ ಹಗುರವಾಗಿರುವುದು ಎಂದಲ್ಲ ಆದರೆ ಇಡೀ ದಿನದಲ್ಲಿ ಸ್ವಭಾವ, ಸಂಸ್ಕಾರ, ಸಂಬಂಧ ಸಂಪರ್ಕದಲ್ಲಿ ಹಗುರವಾಗಿದ್ದೇನೆಯೇ ಎಂದು ನೋಡಿಕೊಳ್ಳಿ ಮತ್ತು ಹಗುರವಾದ ವಸ್ತು ಎಲ್ಲರಿಗೂ ಪ್ರಿಯವೆನಿಸುತ್ತದೆ. ಸರ್ವರ ಪ್ರಿಯ ಹಾಗೂ ಅತೀತವಾಗಿರುವವರೇ ಪರಿಶ್ತಾ. ಹಳೆಯ ದೇಹ, ಹಳೆಯ ದೇಹದ ಸಂಬಂಧದೊಂದಿಗೆ ಅತೀತವಾಗಿರುವುದೇ ಪರಿಶ್ತಾ. ಮೂರನೇಯದು ಫರಿಶ್ತಾ ಸ್ಥಿತಿಯಿಂದ ದೇವತೆ. ದೇವತೆ ಅರ್ಥಾತ್ ಸರ್ವ ಗುಣಗಳಿಂದ ಶೃಂಗಾರಿತರಾಗಿರುವುದು. ಸಂಗಮಯುಗ ದೇವತಾ ಜೀವನದ ಶೃಂಗಾರವಾಗಿದೆ. ಈ ಸಮಯದಲ್ಲಿ ದಿವ್ಯ ಗುಣಗಳಿಂದ ಶೃಂಗಾರಿತರಾಗಿದ್ದಾಗಲೇ ಭವಿಷ್ಯದಲ್ಲಿ ಸ್ಥೂಲ ಶೃಂಗಾರದ ಶೋಭೆಯಿಂದ ಕೂಡಿರುತ್ತೀರಿ. ಮತ್ತು ದೇವತೆ ಅರ್ಥಾತ್ ಕೊಡುವವರು ಹಾಗಾದರೆ ಮಾಸ್ಟರ್ ದಾತರಾಗಿದ್ದೀರಾ? ಎಂದು ಪ್ರಶ್ನಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಶಕ್ತಿ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಬ್ರಾಹ್ಮಣನಿಂದ ಫರಿಶ್ತಾ ಫರಿಶ್ತಾನಿಂದ ದೇವತೆಯಾಗಿದ್ದೇನೆ.

2. ಬ್ರಾಹ್ಮಣನಾಗಿರುವ ನಾನು ಸರ್ವಶಕ್ತಿಗಳಿಂದ ಸಂಪನ್ನವಾಗಿರುವ ಮಾಯಾಜೀತನು.

3. ನಾನು ಕಿರೀಟಧಾರಿ ತಿಲಕಧಾರಿ ಮತ್ತು ಸಿಂಹಾಸನಾಧಿಕಾರಿ.

4. ನಾನು ಸದಾ ಅಲೌಕಿಕ ಮಜಾದ ಬ್ರಾಹ್ಮಣ ಜೀವನದಲ್ಲಿ ಇದ್ದೇನೆ.

5. ನಾನು ಆತ್ಮಿಕ ಮುಖ ಮತ್ತು ಲಕ್ಷಣಗಳನ್ನು ಹೊಂದಿದ್ದೇನೆ.

6. ನಾನು ಲಕ್ಷ್ಯ ಮತ್ತು ಲಕ್ಷಣಗಳನ್ನು ಸಮಾನವಾಗಿಟ್ಟುಕೊಂಡಿದ್ದೇನೆ.

7. ನಾನು ಸಮಯಾನುಸಾರ ಪರಿವರ್ತನಾ ಶಕ್ತಿಯನ್ನು ಉಪಯೋಗಿಸುವ ಸತ್ಯವಾದ ಬ್ರಾಹ್ಮಣನು.

8. ನಾನು ಡಬಲ್ ಲೈಟ್ ಫರಿಶ್ತಾ.

9. ನಾನು ಅಧೀನ ಸಂಸ್ಕಾರಗಳನ್ನು ಸಮಾಪ್ತಿ ಮಾಡಿ ಅಧಿಕಾರಿಯಾಗಿ ಮತ್ತು ಸ್ವತಂತ್ರವಾಗಿದ್ದೇನೆ.

10. ನಾನು ಎಂತಹ ಆತ್ಮನಾಗಿದ್ದೇನೆ, ನಾನು ಯಾರು ಎಂಬ ಪಾಠವನ್ನು ನೆನಪು ಮಾಡಿಕೊಂಡು ಸದಾ ಆನಂದದ, ಮೋಜಿನ ಜೀವನವನ್ನು ಕಳೆಯುತ್ತಿದ್ದೇನೆ.

11. ನಾನು ಸ್ವಭಾವ ಸಂಸ್ಕಾರಗಳಲ್ಲಿ ಸಂಬಂಧ ಸಂಪರ್ಕಗಳಲ್ಲಿ ಹಗುರವಾಗಿದ್ದು ಸರ್ವರಿಗೂ ಪ್ರಿಯ ಮತ್ತು ಅತೀತವಾಗಿರುವ ಅವ್ಯಕ್ತ ಫರಿಶ್ತಾ.

12. ನಾನು ಹಳೆಯದೇಹ ಮತ್ತು ಹಳೆಯಪ್ರಪಂಚ, ದೇಹದ ಸಂಬಂಧಗಳೊಂದಿಗೆ ಅತೀತ ಮತ್ತು ಪ್ರಿಯವಾಗಿರುವ ಡಬಲೈಟ್ ಫರಿಶ್ತಾ.

13. ನಾನು ಬ್ರಹ್ಮಾ ತಂದೆಯ ಸಮಾನವಾಗಿ "ಮಾಡಿ ಮಾಡಿಸುವವರು ತಂದೆ" ಎಂಬ ಸ್ಮೃತಿಯಿಂದ ಸಮರ್ಥವಾಗಿ, ದೇಹಭಾನ ಮತ್ತು ಸೂಕ್ಷ್ಮವಾದ ದೆಹಬಿಮಾನ ಅರ್ಥಾತ್ ನಾನು ಮತ್ತು ನನ್ನದು ಎಂಬ ಸೂಕ್ಷ್ಮ ಅಭಿಮಾನದ ಸಂಬಂಧದಿಂದಲೂ ಸಹಜವಾಗಿ ಅತೀತವಾಗಿರುವ ಅವ್ಯಕ್ತ ಫರಿಶ್ತಾ.

14. ನಾನು ಪರಿಶೀಲನಾ ಶಕ್ತಿಯಿಂದ ಯಾವುದು ಮಾಯೆ, ಯಾವುದು ತಂದೆಯ ಸಮಾನವಾದ ಕರ್ಮ ಎಂದು ತಿಳಿದುಕೊಂಡು ನನ್ನನ್ನು ನಾನು ರಕ್ಷಿಸಿಕೊಂಡಿದ್ದೇನೆ.

15. ನಾನು ಈ ಸಮಯದಲ್ಲಿ ದಿವ್ಯ ಗುಣಗಳಿಂದ ಶೃಂಗರಿತವಾಗಿ ಭವಿಷ್ಯದಲ್ಲಿ ಸ್ಥೂಲ ಶೃಂಗಾರದ ಶೋಭೆಯಿಂದ ಇರುವ ದೇವತೆ ಮತ್ತು ಸದಾ ಕೊಡುವ ಮಾಸ್ಟರ್ ದಾತನು.

16. ನಾನು ಸರ್ವ ಗುಣ ಸಂಪನ್ನ ಮೂರ್ತಿ.

17. ನಾನು ಬ್ರಾಹ್ಮಣ ಸ್ವರೂಪ, ಫರಿಶ್ತಾ ಸ್ವರೂಪ, ದೇವತಾ ಸ್ವರೂಪವನ್ನು ಸದಾ ಸ್ಮೃತಿಯಲ್ಲಿಟ್ಟು ಕೊಂಡಿದ್ದೇನೆ.

18. ನಾನೇ ಫರಿಶ್ತೆಯಾಗಿದ್ದೆನು, ಫರಿಶ್ತೆಯಾಗಿದ್ದೇನೆ ಫರಿಶ್ತೆಯಾಗಿರುತ್ತೇನೆ ಎಂಬ ನಿಶ್ಚಯ ಬುದ್ಧಿ ವಿಜಯೀ ಸ್ವರೂಪ.

19. ನಾನು ಮಹಾ ಪರಿಪಕ್ವವಾಗಿರುವ ಶಕ್ತಿ ಸ್ವರೂಪ.